ನಮ್ಮ ಚಲನೆಗೆ, ಉದ್ಯೋಗಕ್ಕೆ ಮೊದಲು ಜಾತಿ–ಧರ್ಮದ ಕಟ್ಟುಪಾಡುಗಳು ತೊಡಕೆನಿಸುತ್ತಿದ್ದವು. ನಂತರ ಕುಟುಂಬ, ಲಿಂಗರಾಜಕಾರಣ ತೊಡಕಾಗಿತ್ತು. ಈಗ ಅವನ್ನೆಲ್ಲ ದಾಟಿದೆವೆಂದುಕೊಂಡರೆ, ಎಲಎಲಾ! ಮತ್ತೆ ಹೆಣ್ಣುಕಾಯ ಮತ್ತದರ ಜೈವಿಕ ಕ್ರಿಯೆಗಳೇ ತೊಡಕೆಂದು ಭಾವಿಸಲಾಗಿದೆಯಲ್ಲಾ! ಎಂದರೆ ಹೊರಟಲ್ಲಿಗೇ ನಾವು ತಿರುಗಿ ಬಂದು ಮುಟ್ಟಿದೆವೆ? ಯಾವ ಹೆಣ್ತನ ಹೆಮ್ಮೆಯ, ಸಂಭ್ರಮದ, ತೋರಿಕೆಯ ವಸ್ತುವಿಷಯವೋ ಅದೇ ಮಿತಿಯೂ ಆದಂತಾಗಲಿಲ್ಲವೆ?



ಸ್ವಾಯತ್ತತೆಯ ಕುರಿತಾದದ್ದು. ಒಂದೆರಡು ಮಾತ್ರೆ ತೆಗೆದುಕೊಂಡು ಮುಟ್ಟು ಮುಂದೆ ಹಾಕಿದರೆ ಏನೀಗ? ಎನಿಸಬಹುದು. ಏನಿಲ್ಲ. ಹಾರ್ಮೋನು ಮಾತ್ರೆಗಳಿಗಿಂತ ಅಪಾಯಕಾರಿ ದೇಹದ ಸರಕೀಕರಣ.

ನಮ್ಮ ಚಲನೆಗೆ, ಉದ್ಯೋಗಕ್ಕೆ ಮೊದಲು ಜಾತಿ–ಧರ್ಮದ ಕಟ್ಟುಪಾಡುಗಳು, ಸಮಾಜ ಹೇರಿದ ರೂಢಿಗಳು ತೊಡಕೆನಿಸುತ್ತಿದ್ದವು. ನಂತರ ಕುಟುಂಬ, ಲಿಂಗರಾಜಕಾರಣ ತೊಡಕಾಗಿತ್ತು. ಈಗ ಅವನ್ನೆಲ್ಲ ದಾಟಿದೆವೆಂದುಕೊಂಡರೆ, ಎಲಎಲಾ! ಮತ್ತೆ ಹೆಣ್ಣುಕಾಯ ಮತ್ತದರ ಜೈವಿಕ ಕ್ರಿಯೆಗಳೇ ತೊಡಕೆಂದು ಭಾವಿಸಲಾಗಿದೆಯಲ್ಲಾ! ಎಂದರೆ ಹೊರಟಲ್ಲಿಗೇ ನಾವು ತಿರುಗಿ ಬಂದು ಮುಟ್ಟಿದೆವೆ? ಯಾವ ಹೆಣ್ತನ ಹೆಮ್ಮೆಯ, ಸಂಭ್ರಮದ, ತೋರಿಕೆಯ ವಸ್ತುವಿಷಯವೋ ಅದೇ ಮಿತಿಯೂ ಆದಂತಾಗಲಿಲ್ಲವೆ?

ಹೌದು. ಚಾಲಕಿಯಾಗಿ ಮುಮ್ಮುಖ ಕುಳಿತು ವಾಹನವನ್ನು ಹಿಮ್ಮುಖ ಚಲಾಯಿಸಬಾರದು. ನಿಸರ್ಗ ಆರೋಗ್ಯಕರ ದೇಹವನ್ನು ಹೇಗೆ ಕೊಟ್ಟಿದೆಯೋ ಹಾಗೆಯೇ ಅದರ ಜೊತೆಗೆ ಬಾಳುವೆ ಮಾಡಲು ರೂಢಿಸಿಕೊಳ್ಳಬೇಕು. ಅದುವೇ ಘನತೆ. ದೇಹ ನಮ್ಮ ಹೆಮ್ಮೆಯೂ ಅಲ್ಲ, ಮಿತಿಯೂ ಅಲ್ಲ. ಅದು ಇದೆ, ಅದಕ್ಕೇ ಇರಬೇಕು ಅಷ್ಟೆ. ಸಣ್ಣ ಇರುವುದನ್ನು ದಪ್ಪ ಮಾಡಿ, ನೇರ ಇರುವುದನ್ನು ಬಾಗಿಸಿ, ಉದ್ದ ಇರುವುದನ್ನು ಗಿಡ್ಡ ಮಾಡಿ, ಒಟ್ಟಾರೆ ಮಾರುಕಟ್ಟೆ ನಿರೂಪಿಸುವ 'ಸರಿ'ಗೆ, ಸೌಂದರ್ಯಕ್ಕೆ, ಅನುಕೂಲಕ್ಕೆ ತಕ್ಕಂತೆ ತಮ್ಮನ್ನು ಹೊಂದಿಸಿಕೊಳ್ಳುವುದು ಈ ಕಾಲದ ಕ್ರಮವಾಗಿದೆ. ಆದರೆ 'ನಾನು ಹೆಣ್ಣು ಎನ್ನುವುದು ಗೊತ್ತು, ಅದು ನನ್ನ ಮಿತಿಯಲ್ಲ ಎನ್ನುವುದೂ ಗೊತ್ತು' ಎನ್ನುವಂತೆ ಮಹಿಳೆ ರೂಪುಗೊಳ್ಳಬೇಕು. ಮುಟ್ಟಿದ್ದರೂ, ಮಗುವಾಗಿದ್ದರೂ ಅದರ ಜೊತೆಜೊತೆಗೆ ಕಾಲ–ದೇಹ ಎಷ್ಟು ಅನುಮತಿಸುವುದೋ ಅಷ್ಟು ಕ್ರಿಯಾಶೀಲವಾಗಿ ತನ್ನನ್ನು ತೊಡಗಿಸಿಕೊಳ್ಳಬೇಕು. ಅದುವೇ ಸಬಲೀಕರಣ. ಅದೇ ಮಹಿಳಾ ಘನತೆ, ಅದೇ ಸ್ವಾತಂತ್ರ್ಯ.

ಎಂದೇ ಮುಟ್ಟು ಮೈಲಿಗೆ, ಅಶುದ್ಧ ಎನ್ನುವುದನ್ನು ಹೆಣ್ಣುಮಕ್ಕಳು ಮೊದಲು ತಲೆಯಿಂದ ತೆಗೆದುಹಾಕಬೇಕು, ಅದಕ್ಕೆ ಸಮಾಜವನ್ನೂ ಒಪ್ಪಿಸಬೇಕು. ಹೆಣ್ಣುಮಕ್ಕಳಿಗಷ್ಟೇ ಆಗುವ ಒಂದು ವಿಶಿಷ್ಟ ಅನುಭವ ಮುಟ್ಟು. ಅದನ್ನು ಪ್ರತಿ ಹೆಣ್ಣೂ ಸಹಜವಾಗಿ ಎದುರುಗೊಳ್ಳಬೇಕು. ಹಸಿವೆ, ನಿದ್ರೆ, ಮಲಮೂತ್ರ ಬಾಧೆಗಳಂತೆಯೇ ಹೆಮ್ಮೆಯೂ ಅಲ್ಲದ, ಕೀಳರಿಮೆಯೂ ಅಲ್ಲದ ಒಂದು ಸಹಜ ಪ್ರಕ್ರಿಯೆಯೆಂಬಂತೆ ಮುಟ್ಟನ್ನು ಪರಿಗಣಿಸಿ ಅದರೊಡನೆ ಬದುಕುವುದು ಕಲಿಯಬೇಕು. ಮೊಲೆ, ಯೋನಿ, ಗರ್ಭಾಶಯಗಳಿರದಿದ್ದರೂ ಹೆಣ್ಣು ಮನಸಿರುವವರೆಲ್ಲ, ಹೆಣ್ಣುಗಳು ಅಂದುಕೊಳ್ಳುವವರೆಲ್ಲ ಹೆಣ್ಣುಗಳು ಎಂದು ನಮ್ಮ ಲಿಂಗತ್ವದ ವ್ಯಾಖ್ಯಾನ ಬದಲಾಗುತ್ತಿರುವಾಗ ಹೆಣ್ಣುತನ ದೇಹದಲ್ಲಿಲ್ಲ, ಹೆಣ್ಣುಪ್ರಜ್ಞೆಯಲ್ಲಿದೆ ಎಂದು ಅರಿಯಬೇಕು. ಅದನ್ನು ಪುರುಷ ಬಂಧುಗಳಿಗೂ ತಿಳಿಸಿ ಅವರ ಹೆಣ್ಣುಪ್ರಜ್ಞೆ ಉದ್ದೀಪಿಸಬೇಕು.

ಭಾರತ ಸಂವಿಧಾನ ದೇಶದ ಪ್ರತಿ ಪ್ರಜೆಗೂ ಸಮಾನ ಧಾರ್ಮಿಕ–ರಾಜಕೀಯ–ಸಾಮಾಜಿಕ ಹಕ್ಕುಗಳನ್ನು ನೀಡಿದೆ. ಹೆಣ್ಣು ತನ್ನ ಆಯ್ಕೆಯಾಗಿ ಸೂಕ್ತ ಮತ್ತು ಅನುಕೂಲಕರ ಸಂದರ್ಭಗಳಲ್ಲಿ ತನ್ನ ಹಕ್ಕುಗಳನ್ನು ಬಳಸಿಕೊಳ್ಳಬೇಕು. ಸಮಾನತೆ, ಸ್ವಾಯತ್ತತೆ, ಘನತೆಯ ಬದುಕನ್ನು ರೂಪಿಸಿಕೊಳ್ಳಬೇಕು.

ಎಂದೇ ಎಲ್ಲ ಮಹಿಳೆಯರೂ ಮುಟ್ಟಿನ ಸಂಕಷ್ಟಗಳ ಬಗೆಗೆ, ತಾರತಮ್ಯದ ಅನುಭವಗಳ ಬಗೆಗೆ ಮುಕ್ತವಾಗಿ ಮಾತನಾಡೋಣ. ಮಹಿಳಾ ಹಕ್ಕುಗಳನ್ನು ಮುಟ್ಟು ಮೊಟಕುಗೊಳಿಸಲು ಬಿಡದಿರೋಣ. ಹೆಣ್ಣುಗಳೆಲ್ಲ ತಮ್ಮ ದೇಹವನ್ನು, ಬದುಕನ್ನು, ಸಮಾಜವನ್ನು ಸ್ನೇಹಭಾವದಿಂದ ನೋಡುವಂತೆ ಜಾಗೃತಗೊಳಿಸೋಣ. ಗಂಡುಹೆಣ್ಣೆಂಬ ಸಂಕುಚಿತ ಚೌಕಟ್ಟಿನಾಚೆಯಿರುವ ಮಾನವತೆಯ ಬಯಲಿನೆಡೆಗೆ ಸ್ತ್ರೀಪುರುಷರೆಲ್ಲ ನಡೆಯೋಣ...

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in